ಮುಗಿದಮೇಲೆ ರೆಡ್ಡಿ ಡಾಕ್ಯುಮೆಂಟರಿ ಮಾಡತಾನೆ. ತನ್ನ ಜೊತೆ ಚೆಂಗುಟ್ಟಿಯ ಕುಟುಂಬವೆ ಇರುತ್ತದೇನೊ. ಅಥವ ತನಗೆ ಜೊತೆಯಾಗಿ ಬೇರೆಯವರನ್ನ ಮೇಕಪ್ ಮಾಡಿ ಇಂತಹದೆ ಪರಿಸರದಲ್ಲಿ ಮಾಡಲೂಬಹುದು; ಪಕ್ಕಾ ಉದ್ಯಮಿ ಅವನು. ವಿದೇಶಿ ಚಾನಲುಗಳಿಂದ ಕೋಟ್ಯಂತರ ಬಾಚಿಕೊಳತಾನೆ. ಚಾಂಬನ್ ಪರಿವಾರ ಪಾಪ. ಪಾಪ ಯಾಕೆ? ಇವರಿರುವ ಸಹಜ ತೃಪ್ತಿಯ ನೆಲೆಯಲ್ಲಿ ಸದಾ ಬರಗೆಟ್ಟು ಹಪಹಪಿಸುವ ರೆಡ್ಡಿ ತಾನು ಎಲ್ಲ ಶ್ರೀಮಂತರಾ ಅನ್ನುವ ವಿಷಾದ ಹಾದುಹೋಯಿತು. ಚಾಂಬನ್‌ಗೆ ತಾನು ಕೆಲವೆ ದಿನಕ್ಕೆ ಬಂದವ ಅನ್ನುವುದು ಗೊತ್ತಿರಬಹುದು. ಆದರೆ, ಚೆಂಗುಟ್ಟಿಗೆ ಗೊತ್ತಾ ಅನ್ನುವ ಪ್ರಶ್ನೆ ಮೂಡಿ ಒಳಗೇನೋ ಮಿಳಿಯಿತು.

ಬೆಳಗ್ಗೆ ಕಾಡಿಗೆ ಹೋಗಿ ಬೇರು ಗೆಡ್ಡೆ ಸಂಗ್ರಹಿಸಿದ್ದರು. ಆಲದಮರದ ನೆರಳಲ್ಲಿ ಸರಸದಲ್ಲಿ ಮಿಂದ ಉನ್ಮಾದದ ಆಯಾಸದಲ್ಲಿ ನಿಧಾನವಾಗಿ ಗುಡಿಸಲೆದುರು ಬರುತ್ತಿದ್ದಂತೆ ಮುತ್ತುಗದ ಮರದ ನೆರಳಲ್ಲಿ ಕುಳಿತ ಚಾಂಬನ್ ಅವನ ಪಕ್ಕದಲ್ಲಿ ಆವತ್ತು ಕರೆತಂದು ಬಿಟ್ಟ ಜೀನ್ಸ್‌ನವನು ಕಂಡರು. ಜೀನ್ಸ್‌ನವನು ಎದ್ದುನಿತ್ತು, 'ಬನ್ನಿ ಹೋಗುವ' ಅಂದ. ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದವನನ್ನು ಹೇಳಿದ, 'ಸಮಯ ಆಯ್ತುಂತಲ್ಲ, ಇವರದನ್ನು ಅವರು ನೋಡಿಕೊಳತಾರೆ; ಅಲ್ಲಿ ಕಾಯ್ತಿದಾರೆ' ಅವಸರಿಸಿದ. ಯಾಂತ್ರಿಕವಾಗಿ ಒಳವಸ್ತ್ರ ಬರಗಿಕೊಂಡು ತಿರುಗಿ ನೋಡುತ್ತ ಹೊರಟ. ಚೆಂಗುಟ್ಟಿ ನಿಶ್ಚಲವಾಗಿ ಇವನತ್ತ ನೋಡುತ್ತ ನಿತ್ತಿದ್ದಳು. ಮಂಜುಗಣ್ಣಲ್ಲಿ ಅವಳ ಮುಖವನ್ನು ಓದಲಾಗಲಿಲ್ಲ.

ಹಾರಿದ್ದು, ಓಡಿದ್ದು ಒಂದೂ ತಿಳಿಯದ ಮನಃಸ್ಥಿತಿಯ ಪ್ರಯಾಣದಲ್ಲಿ ಹೆಗಡೆಕಟ್ಟಾ ಎಲ್ಲಿಂದಲೋ ಅಡ್ಡಬಂದು ಕೆಡವಿದಂತೆ ಪ್ರತ್ಯಕ್ಷವಾಯಿತು. ಗಾಂಗೇಯ ಎದುರು ಬಂದು, 'ಡ್ರೆಸ್ ಬದಲಿಸಿಕೊ. ಟ್ಯಾಕ್ಸಿಯಲ್ಲಿ ಹೋಗೋಣ' ಬ್ಯಾಗು ಕೊಡುತ್ತ ಅಂದ. ಪ್ಯಾಂಟು ತನ್ನದಲ್ಲ ಅನ್ನುವ ಪರಕೀಯ ಭಾವ ಹುಟ್ಟಿಸಿತು. 'ಅಪೇಕ್ಷಿಸಿದ್ದಕ್ಕಿಂತ ಚನ್ನಾಗಿ ನಿರ್ವಹಿಸಿದೀಯ. ಮೋಟರ್‌ಸೈಕಲ್ ದಾಸಪ್ಪ ಚಾಂಬನ್‌ನಿಂದ ನಿನ್ನ ಸಂಗತಿ ಸಂಗ್ರಹಿಸ್ತಾ ಇದ್ದ. ರೆಡ್ಡಿ ಸಖತ್ ಖುಷಿಯಲ್ಲಿದಾನೆ' ಅಂದ ಕಾರಿನಲ್ಲಿ. 'ಚಾಂಬನ್ ಪರಿವಾರಕ್ಕೇನು ಕೊಟ್ಟರು?' ಕೇಳಿದ. 'ಎರಡು ತಿಂಗಳು ತಾನೆ? ಅರ್ಧ ಕ್ವಿಂಟಲ್ ಅಕ್ಕಿ ಕೊಡಲು ಏರ್ಪಾಡಾಗಿದೆ' ಗಾಂಗೇಯ ನುಡಿದ. 'ಹೋಟೆಲಿನಲ್ಲಿ ನಿಸ್ಸತ್ವ ಅನಿಸುವ ಊಟ ಮಾಡಿದ ನನಗೆ ಅವರೊಂದಿಗೇ ಇದ್ದುಬಿಡುವ ಅನಿಸ್ತಾ ಇದೆ. ಅಲ್ಲೇನು ತೊಂದರೆಯಿಲ್ಲ' ಅಂದ. ಮಾತಿನಲ್ಲಿಯ ಪ್ರಾಮಾಣಿಕತೆ ತಟ್ಟಿದ ಗಾಂಗೇಯನಿಗೆ ಅಂದುಕೊಂಡದ್ದಕ್ಕಿಂತ ಆಳದ ಅನುಭವಕ್ಕಿಳಿದ ಹಾಗಿದೆ ಅನಿಸಿ, 'ನೀನು ಬೆಂಗಳೂರಲ್ಲಿ ಒಂದುವಾರ ಇರು. ಅನುಭವವನ್ನು ಯಥಾವತ್ತಾಗಿ ರೆಕಾರ್ಡ್ ಮಾಡಿ ಹತ್ತುಲಕ್ಷದ ಚೆಕ್ ಬ್ಯಾಂಕಿಗೆ ಹಾಕಿಕೊ. ನಂತರ ನಿಂಗೇ ಗೊತ್ತಾಗತದೆ' ಅಂದ ಬೆನ್ನು ತಟ್ಟುತ್ತಾ.


### ಬನವಾಸಿ ವೆಂಕಟೇಶ ದೀಕ್ಷಿತ್

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ದೂರಸಂಪರ್ಕ ಇಲಾಖೆಯಲ್ಲಿ ಉಪ ಮಹಾಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾಸಂಕಲನಗಳು: 'ಕಾವಡಿ', 'ಬೇರಿಗಂಟಿದ ಮಣ್ಣು', 'ಗಡಿಯೀಚೆಯ ಸದ್ದುಗಳು'. ಕಾದಂಬರಿ: 'ನಕ್ಷತ್ರ ನುಂಗುವ ಸದ್ದು'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.